# ಮಾಂಡವಿ

ಭಾರತೀಯ ಸ್ತ್ರೀಯರು ಸಾವಿರಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಆದರ್ಶಗಳನ್ನು ಮಾಂಡವಿಯ ಮೂಲಕ ಪರಿಚಯಿಸಿರುವ ಲೇಖಕಿ ಮೈಸೂರಿನವರು. ಇತಿಹಾಸದ ಉಪನ್ಯಾಸಕಿಯಾಗಿದ್ದ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ರಾಮಾಯಣದಲ್ಲಿ ಬರುವ ಸ್ತ್ರೀಯರೆಲ್ಲ ಶಾಂತ ಪ್ರಕೃತಿಯವರು. ಮುನ್ನುಗ್ಗಿ ಛಲದಿಂದ ಪ್ರತಿಭಟಿಸಿದವರಲ್ಲ. ಆದರೂ ಮನಸ್ಸಿನಲ್ಲೇಳುವ ಹೊಯ್ದಾಟಗಳನ್ನು ಹತ್ತಿಕ್ಕಲಾದೀತೆ? ಮಾಂಡವಿಯ ಮೂಲಕ ರಾಮಾಯಣವನ್ನು ಮತ್ತೊಮ್ಮೆ ಪರಿಶೀಲಿಸುವ, ಬನ್ನಿ

ಸೇವಂತಿ ಡಿ. ರೈ

ನದೀ ತೀರದಲ್ಲಿ ಕುಳಿತ ಮಾಂಡವಿ, ಸರಯೂ ನದಿ ಮಂದಗಮನೆಯಾಗಿ ಹರಿಯುವುದನ್ನೇ ನೋಡುತ್ತಿದ್ದಳು. ಅದರ ಕಲಕಲ ನಿನಾದವು ಮಾಂಡವಿಗೆ ಕೇಳಿಸುತ್ತಿತ್ತೋ ಇಲ್ಲವೋ ತಿಳಿಯದು. ಆಕೆ ಚಿಂತಾಕ್ರಾಂತಳಾಗಿದ್ದಳೆಂಬುದು ಆಕೆಯ ಬಾಡಿದ ಮುಖಕಮಲದಿಂದ ಗೊತ್ತಾಗುತ್ತಿತ್ತು. ಪಕ್ಕದ ಇನ್ನೊಂದು ಬಂಡೆಯ ಮೇಲೆ ಕುಳಿತಿದ್ದ ಶ್ರುತಕೀರ್ತಿ ತನ್ನ ಸಖಿಯರು ಆಯ್ದು ತಂದ ಬಕುಲಪುಷ್ಪಗಳನ್ನು ಪೋಣಿಸುತ್ತಿದ್ದಳು.

ಶ್ರುತಕೀರ್ತಿ ಸದಾ ಹಸನ್ಮುಖಿ, ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಾ ಅದರಲ್ಲೇ ತನ್ಮಯಳಾಗುತ್ತಾಳೆ. ದುಂಬಿಗಳೊಡನೆ ತಾನೂ ದುಂಬಿಯಾಗಿ ನಲಿಯುತ್ತಾಳೆ, ಹೂಗಳಲ್ಲಿ ತಾನೂ ಹೂವಾಗಿ ತಲೆದೂಗುತ್ತಾಳೆ, ಲತೆಗಳಲ್ಲಿ ತಾನೂ ಲತೆಯಾಗಿ ತನ್ನ ನಳಿದೋಳುಗಳಿಂದ ವೃಕ್ಷಗಳನ್ನು ಆಲಿಂಗಿಸುತ್ತಾಳೆ, ವಸಂತಕಾಲದ ಕೋಗಿಲೆಯ ಧ್ವನಿಗೆ ದನಿಗೂಡಿಸುತ್ತಾಳೆ, ವರ್ಷಾಕಾಲದ ಮೇಘಗಳನ್ನು ನೋಡಿ ಉತ್ಸಾಹದಿಂದ ಗರಿಗೆದರಿ ನರ್ತಿಸುವ ನವಿಲಿನೊಡನೆ ತಾನೂ ನವಿಲಾಗಿ ನರ್ತಿಸುತ್ತಾಳೆ. ಬಾಲ್ಯದಲ್ಲಿ ಆಕೆಯನ್ನು ಕಿರಿಯ ಮಗಳು ಎಂದು ಎಲ್ಲರೂ ಮುದ್ದಿಸಿದ್ದರು. ವಿವಾಹದ ಬಳಿಕ ಕಿರಿಯ ಸೊಸೆ ಎಂದು ಪ್ರೀತಿಸಿದರು. ಇಂದು ಆಕೆಯ ಪ್ರೀತಿಯ ಅಕ್ಕನ ಮುಖ ಬಾಡಿರುವುದನ್ನು ಕಂಡು ಆಕೆಗೆ ದುಃಖವಾಗುತ್ತಿದೆ. ಇತ್ತೀಚೆಗೆ ತನ್ನ ಅಕ್ಕ ನಕ್ಕು ನಲಿಯುತ್ತಿರುವುದನ್ನು ಆಕೆ ನೋಡಿಯೇ ಇಲ್ಲ.

ಈ ಸೋದರಿಯರು ಕುಳಿತ ಸ್ಥಳ ಬಹಳ ರಮಣೀಯವಾಗಿತ್ತು. ಬೆಟ್ಟದಿಂದ ಹರಿದು ಬರುತ್ತಿರುವ ಝರಿಗಳು ಸರೋವರಕ್ಕೆ ಧುಮ್ಮಿಕ್ಕುತ್ತಿದ್ದವು. ಅದರ ರಭಸಕ್ಕೆ ಭಯಗೊಂಡ ಕೆಂದಾವರೆಗಳು ಅದರ ಹತ್ತಿರಕ್ಕೂ ಸುಳಿಯದೆ, ನಿನ್ನ ಆರ್ಭಟ ನಮಗೆ ಬೇಡ, ನಾವು ಶಾಂತಿಪ್ರಿಯರು ಎಂಬಂತೆ, ಸರೋವರದ ಮತ್ತೊಂದು ಭಾಗದಲ್ಲಿ ಸೂರ್ಯನತ್ತ ಮುಖ ಮಾಡಿ ನಿಂತಿದ್ದವು.

ಬಹಳ ಹೊತ್ತು ಮೌನವಾಗಿ ಕುಳಿತಿದ್ದರು ಈ ಸೋದರಿಯರು. ಅವರಿಗೆ ಮಾತಾಡಲು ವಿಷಯವೇ ಇರಲಿಲ್ಲವೇನೋ? ಕೊನೆಗೆ ಮೌನ ಮುರಿದು ಶ್ರುತಕೀರ್ತಿ ಕೇಳಿದಳು, "ಅಕ್ಕಾ ಮಾಂಡವಿ, ನಾಳೆಗೆ ಹದಿನಾಲ್ಕು ವರ್ಷಗಳ ವನವಾಸ ಮುಗಿಯುತ್ತಿದೆಯಲ್ಲಾ? ಆಮೇಲಾದರೂ ನಿನ್ನ ಮುಖಾರವಿಂದ ಅರಳಬಹುದು!"

"ತಂಗಿ ಶ್ರುತಕೀರ್ತಿ, ನೀನು ಯಾರ ವನವಾಸದ ಕುರಿತು ಹೇಳುತ್ತಿರುವೆ?"

"ಇದೇನಕ್ಕಾ ಹೀಗೆ ಹೇಳುತ್ತಿರುವೆ! ಶ್ರೀರಾಮಚಂದ್ರ ಸೀತೆಯರದಲ್ಲದೆ ಮತ್ತ್ಯಾರದು! "

ಮಾಂಡವಿ ಉತ್ತರಿಸಲಿಲ್ಲ. ವನವಾಸ ಯಾರಿಗೆಂಬುದೇ ಅವಳ ಪ್ರಶ್ನೆಯಾಗಿತ್ತು.

ವಿದೇಹದ ರಾಜನಾದ ಜನಕನ ಅರಮನೆಯಲ್ಲೊಂದು ಬಹಳ ದೊಡ್ಡ ಮರದ ಪೆಟ್ಟಿಗೆ ಇತ್ತು. ಅದರೊಳಗೆ ಪವಿತ್ರವಾದ ಶಿವಧನುಸ್ಸಿತ್ತು. ಆ ಶಿವಧನಸ್ಸನ್ನು ಇಟ್ಟ ಪೆಟ್ಟಿಗೆಗೆ ಎಂಟು ಚಕ್ರಗಳಿದ್ದವು. ನೂರಾರು ಜನ ಸೇರಿ ಒಟ್ಟಾಗಿ ತಳ್ಳಲು ಯತ್ನಿಸಿದರೂ ಆ ಪೆಟ್ಟಿಗೆಯನ್ನು ಅಲುಗಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಒಂದು ದಿನ ಈ ರಾಜಕುಮಾರಿಯರು ತಮ್ಮ ಸಖಿಯರೊಂದಿಗೆ ಚೆಂಡಾಡುತ್ತಿರುವಾಗ, ಚೆಂಡು ಈ ಪೆಟ್ಟಿಗೆಯ ಅಡಿಯಲ್ಲಿ ಸೇರಿಕೊಂಡಿತು. ಅದನ್ನು ಹೊರತೆಗೆಯಲು ಯಾರಿಂದಲೂ ಸಾಧ್ಯವಾಗಲಿಲ್ಲ. ಆಗ ಅಯೋನಿಜೆಯಾದ ಸೀತೆ, ತನ್ನ ಇಷ್ಟ ದೇವತೆ ಗಾಯತ್ರಿದೇವಿಯನ್ನು ಸ್ಮರಿಸುತ್ತಾ ಶಿವಧನುಸ್ಸಿದ್ದ ಪೆಟ್ಟಿಗೆಯನ್ನು ಯಾರ ಸಹಾಯವೂ ಇಲ್ಲದೆ ಬಹಳ ಸುಲಭವಾಗಿ ಸರಿಸಿ, ಅದರ ಅಡಿಯಲ್ಲಿದ್ದ ಚೆಂಡನ್ನು ತೆಗೆದಳು. ಎಲ್ಲರಿಗೂ ಅಚ್ಚರಿಯೋ ಅಚ್ಚರಿ! ಅಂದೇ ಆ ಕ್ಷಣದಲ್ಲಿ ಜನಕ ಮಹಾರಾಜ ಪ್ರತಿಜ್ಞೆ ಮಾಡಿ, ಆ ಶಿವಧನುಸ್ಸಿಗೆ ಮೊದಲು ಹೆದೆ ಏರಿಸಿದವನಿಗೆ ಮಾತ್ರ ತನ್ನ ಪ್ರೀತಿಯ ಸಾಕುಮಗಳು, ಗುಣವತಿ, ರೂಪವತಿ, ವಿದ್ಯಾವತಿ ಸೀತೆಯನ್ನು ವಿವಾಹ ಮಾಡಿಕೊಡುವುದಾಗಿ ಹೇಳಿದ.

ಆ ಸುದ್ದಿ ತಿಳಿದ ಬೇರೆ ಬೇರೆ ದೇಶಗಳ ರಾಜಕುಮಾರರನೇಕರು ಶಿವಧನುಸ್ಸನ್ನು ಎತ್ತಿ ಹೆದೆ ಏರಿಸಲು ಪ್ರಯತ್ನಿಸಿ ವಿಫಲರಾದರು. ಅವರಿಗೆ ಮಿಥಿಲೇಶ್ವರನ ಸಂಬಂಧ ಬೆಳೆಸುವ ಆತುರ. ತನ್ನ ನಾಲ್ವರು ಮಕ್ಕಳಿಗೂ ಯೋಗ್ಯ ವರರನ್ನು

ಜನಕರಾಜನು ಹುಡುಕುತ್ತಿದ್ದ.

ಯಜ್ಞರಕ್ಷಣೆಗೆಂದು ವಿಶ್ವಾಮಿತ್ರ ಮಹರ್ಷಿಗಳೊಡನೆ ಬಂದಿದ್ದ ಅಯೋಧ್ಯೆಯ ರಾಜಕುಮಾರರಾದ ರಾಮಲಕ್ಷ್ಮಣರು ಮಿಥಿಲಾ ನಗರಿಯನ್ನು ತಲುಪಿದ್ದರು. ರಾಜರ್ಷಿ ಜನಕ ಮಹಾರಾಜ ಅವರನ್ನು ತನ್ನ ಅರಮನೆಗೆ ಆಹ್ವಾನಿಸಿದ. ಮಹಾತಪಸ್ವಿ ವಿಶ್ವಾಮಿತ್ರರ ಅಪ್ಪಣೆ ಪಡೆದು ಶ್ರೀರಾಮಚಂದ್ರ ಶಿವಧನುಸ್ಸನ್ನು ಎತ್ತಿ ಹಿಡಿದು, ಅದಕ್ಕೆ ಹೆದೆ ಏರಿಸಲು ಹೊರಟಾಗ, ಸಿಡಿಲಬ್ಬರವನ್ನು ಮೀರಿಸುವ ಶಬ್ದದೊಡನೆ ಅದು ಮುರಿದುಬಿತ್ತು. ಅಯೋಧ್ಯೆಗೆ ದೂತನನ್ನು ಕಳುಹಿಸಿ ವಿಷಯ ತಿಳಿಸಲಾಯಿತು. ಸುದ್ದಿ ತಿಳಿದ ದಶರಥ ಮಹಾರಾಜ ತನ್ನ ಪರಿವಾರದೊಡನೆ ಮಿಥಿಲೆಗೆ ಬಂದಿಳಿದ. ಶ್ರೀರಾಮನೊಡನೆ ಸೀತೆಯ ವಿವಾಹವು ನಿಶ್ಚಯವಾಯಿತು. ಎಲ್ಲವೂ ಪೂರ್ವ ನಿಶ್ಚಿತವಾದಂತೆ! ಹಿಂದಿನ ಜನ್ಮದ ಜೀವನಯಾತ್ರೆ ಈ ಜನ್ಮದಲ್ಲಿ ಮುಂದುವರಿಯುತ್ತಿರುವಂತೆ ಕಂಡಿತು. ಈ ಶುಭ ಘಳಿಗೆಯಲ್ಲೇ ಊರ್ಮಿಳೆ, ಮಾಂಡವಿ ಮತ್ತು ಶ್ರುತಕೀರ್ತಿಯರ ವಿವಾಹವನ್ನು ಲಕ್ಷ್ಮಣ, ಭರತ ಮತ್ತು ಶತ್ರುಘ್ನರೊಡನೆ ಮಾಡುವುದೆಂದು ಎರಡೂ ರಾಜವಂಶಗಳ ಕುಲಪುರೋಹಿತರೂ, ಗುರು ಹಿರಿಯರೂ, ಮಾತಾಪಿತರೂ ನಿಶ್ಚಯಿಸಿದರು. ವಿವಾಹವು ವೈಭವದಿಂದ ನಡೆಯಿತು. ಆಗ ಈ ಸೋದರಿಯರ ಅಭಿಪ್ರಾಯವನ್ನು ಯಾರೂ ಕೇಳಲಿಲ್ಲ. ಕೇಳುವ ಪ್ರಶ್ನೆಯೇ ಇರಲಿಲ್ಲ. ಆ ಕುರಿತು ಈ ಕನ್ಯೆಯರೂ ಯೋಚಿಸಿಯೂ ಇರಲಿಲ್ಲ. ಗುರುಹಿರಿಯರು ತಮ್ಮ ಹಿತವನ್ನೇ ಬಯಸುತ್ತಾರೆಂಬುದರ ಅರಿವು ಅವರಿಗಿತ್ತು. ಆ ಕಾಲದಲ್ಲಿ ಸ್ವಯಂವರ ಪದ್ಧತಿ ಇದ್ದರೂ, ಸಾಕೇತದ ರಾಜಕುಮಾರರು ವಿದೇಹದ ರಾಜಕುಮಾರಿಯರನ್ನು ಗುರುಹಿರಿಯರ ಅಪೇಕ್ಷೆಯಂತೆ ವಿವಾಹವಾದರು. ದುಃಖ ದುಮ್ಮಾನಗಳು ತಾಗದಂತೆ ಇವರು ಸದಾ ಸುಖಿಗಳಾಗಿ ಬಾಳಲಿ ಎಂದು ನೆರೆದವರೆಲ್ಲಾ ಹರಸಿದರು.

ವಿವಾಹ ಬಳಿಕವೂ ತಾವು ನಾಲ್ವರು ಸೋದರಿಯರು ಜತೆಯಲ್ಲಿ ಇರಬಹುದೆಂಬ ಸಂತೋಷ ಈ ಮಿಥಿಲೆಯ ರಾಜಕುಮಾರಿಯರಿಗೆ. ಅಕ್ಕ ಸೀತೆ ಯುವರಾಣಿಯಾಗುವಳೆಂಬ ಸಡಗರ. ಈ ಸೋದರಿಯರ ಮಧ್ಯೆ ದ್ವೇಷಾಸೂಯೆಗಳಿರಲಿಲ್ಲ, ಪ್ರೀತಿಯ ಬಂಧನವಿತ್ತು.

ಕೇಕಯ ರಾಜ್ಯ ಅಯೋಧ್ಯೆಯ ಹತ್ತಿರವಿದ್ದ ಒಂದು ಚಿಕ್ಕ ರಾಜ್ಯ. ದಶರಥ ಮಹಾರಾಜನ ಮುದ್ದಿನ ಕಿರಿಯ ರಾಣಿ, ಭರತನ ತಾಯಿ, ಕೇಕಯ ರಾಜನ ಮಗಳು, ಕೈಕೆ. ಅವಳ ಸೌಂದರ್ಯವನ್ನು ಮೀರಿಸುವ ಸುಂದರಿಯರು ಆ ಕಾಲದಲ್ಲಿ ಯಾರೂ ಇರಲಿಲ್ಲವಂತೆ. ಇವಳ ಅಗ್ರಜ ಯುಧಾಜಿತ್ತು, ಭರತನನ್ನು ತನ್ನೂರಿಗೆ ಕರೆದೊಯ್ಯಲು ಅಯೋಧ್ಯೆಗೆ ಹೋಗಿದ್ದವನು, ವಿವಾಹದ ಸುದ್ದಿ ತಿಳಿದು ಮಿಥಿಲೆಗೆ ಬಂದಿದ್ದನು. ತನ್ನ ವಿವಾಹಕಾಲಕ್ಕೆ ಸರಿಯಾಗಿ ಬಂದಿಳಿದ ಸೋದರಮಾವನನ್ನು ಕಂಡು ಭರತನಿಗೆ ಅತ್ಯಾನಂದವಾಯಿತು. ಮದುವೆಯ ಮಂಗಳಕಾರ್ಯಗಳು ಮುಗಿದೊಡನೆಯೇ ಭರತನು ಮಡದಿ ಮಾಂಡವಿಯೊಡನೆ ಅಯೋಧ್ಯೆಗೆ ಹೋಗದೆ ತನ್ನ ತಾತನಿಗೆ ನಮಸ್ಕರಿಸಿ ಆಶೀರ್ವಾದ ಪಡೆಯಲು ಕೇಕಯ ರಾಜ್ಯದತ್ತ ಪಯಣಿಸಿದನು.

ಒಂದು ದಿನ ಅಯೋಧ್ಯೆಯ ದೂತನೊಬ್ಬ ಗಿರಿವ್ರಜಕ್ಕೆ ಬಂದು ಗುರುದೇವ ವಸಿಷ್ಠರ ಸಂದೇಶವನ್ನು ಭರತನಿಗೆ ತಿಳಿಸಿದ. ತುರ್ತು ರಾಜಕಾರಣದ ನಿಮಿತ್ತ ತಕ್ಷಣ ಅಯೋಧ್ಯೆಗೆ ಬರಲು ಆತನಿಗೆ ತಿಳಿಸಲಾಗಿತ್ತು. ಕಾರಣ ಗೊತ್ತಿಲ್ಲದೆ ಭರತಾದಿಗಳು ಕಳವಳಕ್ಕೀಡಾಗಿ ಮರುಕ್ಷಣವೇ ಅಯೋಧ್ಯೆಗೆ ಪ್ರಯಾಣ ಬೆಳೆಸಿದರು. ಯಾರ ಮನಸ್ಸಿಗೂ ಸಮಾಧಾನವಿಲ್ಲದ ಪ್ರಯಾಣ ತುಂಬಾ ಆತಂಕದಾಯಕವಾಗಿತ್ತು. ದಾರಿಯುದ್ದಕ್ಕೂ ಮಾಂಡವಿಗೆ ಅಪಶಕುನಗಳು ಕಾಣುತ್ತಿದ್ದವು. ಆಕೆಯ ಮನದಲ್ಲಿ ಏನೋ ಕಳವಳ. ಸುದ್ದಿ ತಿಳಿದ ಎಂಟನೇ ದಿನದಂದು ಅವರೆಲ್ಲ ಅಯೋಧ್ಯೆ ತಲುಪಿದರು. ಅರಮನೆ ತಲುಪಿದಾಗ ಅಲ್ಲಿಯ ದೃಶ್ಯ ಭರತನನ್ನು ಕಂಗೆಡಿಸಿತು.

ಭರತನು ತನ್ನ ತಂದೆಯ ಅಂತ್ಯಕ್ರಿಯೆ ಮುಗಿಸಿ, ಮೃತರ ನೆನಪಿನಲ್ಲಿ ದಾನಧರ್ಮಗಳನ್ನು ಮಾಡಿ, ಮಗನ ಕರ್ತವ್ಯವನ್ನು ನೆರವೇರಿಸಿದನು. ತನ್ನ ತಾಯಿ ಕೈಕೇಯಿಯ ವರ್ತನೆಯನ್ನು ಆತನಿಗೆ ಕ್ಷಮಿಸಲು ಸಾಧ್ಯವಾಗಲಿಲ್ಲ. ಆಕೆಯ ಹಟದಿಂದ ದೊರೆತ ರಾಜ್ಯವನ್ನು ಆತ ತಿರಸ್ಕರಿಸಿದ. ಶ್ರೀರಾಮನೇ ಸಾಕೇತ ಸಿಂಹಾಸನಾಧೀಶನಾಗಲು ಅರ್ಹನೇ ಹೊರತು ತಾನಲ್ಲ ಎಂದು ತಿಳಿದು, ಭರತನು ಒಂದು ದಿನವೂ ತಡಮಾಡದೆ ಶ್ರೀರಾಮನನ್ನು ಅರಸುತ್ತಾ ಅರಣ್ಯದತ್ತ ಹೊರಟ. ಆತನ ಹಿಂದೆ ರಾಜ ಪರಿವಾರವೂ, ಸೇನೆಯೂ ಹೊರಟಿತು. ಆದರೆ ಭರತನು ರಾಜತ್ವದ ಸಂಕೇತವಾದ ಬೆಳ್ಗೊಡೆಯನ್ನಾಗಲಿ ಇತರ ಲಾಂಛನಗಳನ್ನಾಗಲಿ ಉಪಯೋಗಿಸಲಿಲ್ಲ. ತನ್ನನ್ನು ಅರಸನೆಂದೇ ಭಾವಿಸದಿದ್ದಾಗ, ಈ ಸಂಕೇತಗಳ ಅವಶ್ಯಕತೆ ಆತನಿಗಿರಲಿಲ್ಲ. ತನ್ನ ಅಣ್ಣ ಶ್ರೀರಾಮಚಂದ್ರನ ಮನವೊಲಿಸಿ, ಆತನನ್ನು ಹಿಂದಕ್ಕೆ ಕರೆತಂದು, ಅಯೋಧ್ಯೆಯ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡುವುದೇ ಅವನ ಉದ್ದೇಶವಾಗಿತ್ತು.

ಅಷ್ಟರಲ್ಲೇ ಶ್ರೀರಾಮನು ಸೀತಾಲಕ್ಷ್ಮಣರ ಸಮೇತ ಚಿತ್ರಕೂಟದ ಪರ್ಣಕುಟೀರದಲ್ಲಿ ತಂಗಿದ್ದನು. ಅಲ್ಲಿಗೆ ಓಡೋಡಿ ಬಂದ ಭರತನು ಹಿಂದಕ್ಕೆ ಬರುವಂತೆ ಶ್ರೀರಾಮನನ್ನು ಬಹುವಾಗಿ ಪ್ರಾರ್ಥಿಸಿದನು. ಪರಿಪರಿಯಾಗಿ ಬಿನ್ನವಿಸಿಕೊಂಡಾಗಲೂ ಶ್ರೀರಾಮನು ಒಪ್ಪದಿದ್ದಾಗ, ಭರತನು ಶ್ರೀರಾಮನ

ಪಾದುಕೆಗಳನ್ನು ಪಡೆದು, ಅವುಗಳನ್ನು ಶಿರದಲ್ಲಿ ಹೊತ್ತುಕೊಂಡು, ಅಯೋಧ್ಯೆಗೆ ಹಿಂತಿರುಗಿದ. ಆ ಪಾದುಕೆಗೇ ಪಟ್ಟಾಭಿಷೇಕ ಮಾಡಿ, ಆ ಪಾದುಕೆಯ ಪ್ರತಿನಿಧಿಯಾಗಿ ಅಯೋಧ್ಯೆಯ ಹೊರವಲಯದ ನಂದೀ ಗ್ರಾಮದಲ್ಲಿದ್ದುಕೊಂಡು ರಾಜ್ಯಭಾರವನ್ನು ನೋಡಿಕೊಳ್ಳುತ್ತಿದ್ದ.

ಮಾಂಡವಿಗೆ ತನ್ನ ಬಾಲ್ಯದ ನೆನಪಾಯಿತು. ಜನಕರಾಜನ ಅರಮನೆಯಲ್ಲಿ ಯಾವ ದುಃಖದ ಸುಳಿವೂ ಇಲ್ಲದೆ ನಲಿಯುತ್ತಿದ್ದ ತಾವು ನಾಲ್ವರು ರಾಜಕನ್ಯೆಯರು, ಒಂದೇ ತಾಯ ಹೊಟ್ಟೆಯಲ್ಲಿ ಹುಟ್ಟಿದವರಂತೆ ಅನ್ಯೋನ್ಯವಾಗಿ ಉದ್ಯಾನವನಗಳಲ್ಲಿ ಆಟವಾಡಿಕೊಂಡಿರುತ್ತಿದ್ದುದು ನೆನಪಾಗಿ, ಮುಖದಲ್ಲಿ ನಗುವೊಂದು ತೇಲಿಬಂತು. ವಿವಾಹದ ವಿಧಿಗಳೆಲ್ಲಾ ಒಂದು ಆಟದಂತೆ ನಡೆದುಹೋಗಿದ್ದವು. ಆ ದಿನಗಳನ್ನು ಮೆಲುಕುಹಾಕುತ್ತಿದ್ದ ಮಾಂಡವಿಗೆ, ಅಯೋಧ್ಯೆಯ ದೂತನು ಗಿರಿವ್ರಜಕ್ಕೆ ಬಂದು ಭರತನನ್ನು ಹಿಂದಕ್ಕೆ ಬರಲು ತಿಳಿಸಿದಾಗಲೇ ತನ್ನ ಆನಂದಕ್ಕೆ ವಿರಾಮಚಿಹ್ನೆ ಬಿದ್ದುದು ಅರಿವಿಗೆ ಬಂತು. ಆ ಬಳಿಕದ ತನ್ನ ಬರಡು ವೈವಾಹಿಕ ಜೀವನದ ನೆನಪಾಗಿ ಆಕೆಗೆ ಅಳು ಬಂತು. ವಿವಾಹಕಾಲದಲ್ಲಿ ಸಪ್ತಪದಿ ತುಳಿದಾಗ ಕಷ್ಟಸುಖಗಳಲ್ಲಿ ಸಹಭಾಗಿಯಾಗಿರುತ್ತೇನೆಂದು ಪ್ರಮಾಣ ಮಾಡಿದ ಭರತ, ಕೆಲವೇ ದಿನಗಳಲ್ಲಿ ಅದನ್ನೆಲ್ಲಾ ಮರೆತನೇ? ತನ್ನನ್ನು ಕೇಳಿದ್ದರೆ ತಾನೇನು ಬೇಡವೆನ್ನುತ್ತಿದ್ದನೆ? ತಾನೂ ಆತನ ಜತೆ ವ್ರತ ಕೈಗೊಂಡು, ಆತನಿಗೆ ನೆರವಾಗುತ್ತಿದ್ದ ಸಂತೃಪ್ತಿ ತನಗೆ ದೊರೆಯುತ್ತಿರಲಿಲ್ಲವೇ? ಈಗ ತನ್ನ ಈ ತರಹದ ವನವಾಸ ಯಾರಿಗೂ ಅರಿವಾಗದೇ, ತಾನು ಇದ್ದೂ ಇಲ್ಲವಾದ ಅನುಭವವಾಗಿ ಆಕೆಗೆ ಅಳು ಬಂತು.

ಅಕ್ಕ ಸೀತೆ ರಾಮನ ಹಿಂದೆಯೇ ಹೋಗಿ ಮಹಾಪತಿವ್ರತೆ ಎಂಬ ಹೆಸರುಗಳಿಸಿದಳು. ಬಾಲ್ಯದಿಂದಲೂ ಆಕೆಗೆ ಪ್ರಥಮ ಸ್ಥಾನ, ಹೆಚ್ಚಿನ ಗೌರವ. ಆಕೆಯನ್ನೇ ವೈದೇಹಿ ಎನ್ನುವರು. ತಾವು ನಾಲ್ವರೂ ರೂಪದಲ್ಲಿ, ಗುಣದಲ್ಲಿ ವಿದ್ಯೆಯಲ್ಲಿ ಸಮಾನರಿದ್ದರೂ, ಸೀತೆಗೆ ಮಾತ್ರ ವಿಶೇಷ ಸ್ಥಾನ, ವಿಶೇಷ ಆದರವಿತ್ತು. ಆದರೆ ಸೀತೆಯ ಮೇಲೆ ಆಕೆಗೆ ಅಸೂಯೆಯೇನೂ ಇಲ್ಲ. ಮಾಂಡವಿಯ ಇನ್ನೊಂದು ಹೆಸರೇ ಅನಸೂಯೆ, ಆ ಹೆಸರು ಅವಳಿಗೆ ಅನ್ವರ್ಥವಾಗಿತ್ತು. ಅವಳಿಗೆ ಸೀತೆಯೆಂದರೆ ಅಕ್ಕರೆ, ಗೌರವ, ಅಭಿಮಾನ. ಸಾಕ್ಷಾತ್ ಶ್ರೀಲಕ್ಷ್ಮಿಯೇ ಸೀತಾ ಮಾತೆಯಾಗಿ, ಭೂದೇವಿಯ ಪುತ್ರಿಯಾಗಿ, ಕ್ಷಮಯಾಧರಿತ್ರಿಯಾಗಿ ಅವತರಿಸಿದ್ದಾಳೆ ಎಂಬುದೇ ತಂಗಿಯರ ನಂಬಿಕೆಯಾಗಿತ್ತು.

ವನವಾಸದಲ್ಲಿದ್ದರೂ ರಾಮನ ಸಾನ್ನಿಧ್ಯದಲ್ಲಿದ್ದ ಸೀತೆಗೆ ವಾಸ್ತವವಾಗಿ ಅಗಲುವಿಕೆಯ ನೋವಿರಲಿಲ್ಲ. ಊರ್ಮಿಳೆ



ಯಂತೂ ರಾಮನ ಸೇವೆಗೆಂದು ತನ್ನ ಪತಿ ಲಕ್ಷ್ಮಣನನ್ನು ಸಂತೋಷದಿಂದಲೇ ಕಳುಹಿಸಿಕೊಟ್ಟು, ಅತ್ತೆಯರ ಸೇವೆ ಮಾಡುತ್ತಾ ಸನ್ಯಾಸಿಯಂತಿದ್ದಾಳೆ. ನಾವು ನಾಲ್ವರು ಸೋದರಿಯರಲ್ಲಿ ಶ್ರುತಕೀರ್ತಿಯೇ ಅದೃಷ್ಟವಂತೆ! ಪತಿ ಶತ್ರುಘ್ನನೊಡನೆ ಆನಂದದಿಂದ ಇದ್ದಾಳೆ. ನನ್ನ ಪರಿಸ್ಥಿತಿ ಮಾತ್ರ ಯಾರಿಗೂ ಬರಬಾರದು. ಕಣ್ಣ ಮುಂದೆ ಪತಿ ಇದ್ದರೂ, ಆತ ಜಟಾಧಾರಿಯಾಗಿ, ಕಾಷಾಯವಸ್ತ್ರ ತೊಟ್ಟು ಕಂದಮೂಲಗಳನ್ನು ಸೇವಿಸುತ್ತ ಶ್ರೀರಾಮನ ಪಾದುಕೆಗಳನ್ನೇ ಆರಾಧಿಸುತ್ತ, ರಾಮಪಾದುಕೆಯ ಪ್ರತಿನಿಧಿಯಾಗಿ ರಾಜ್ಯಭಾರ ನಡೆಸುತ್ತಿದ್ದಾನೆ. ತನಗೊಬ್ಬಳು ಹೆಂಡತಿ ಇರುವುದನ್ನೂ ಮರೆತಂತಿದೆ. ಬ್ರಹ್ಮಚರ್ಯದಲ್ಲಿ ನಿಂತು ನನ್ನಿಂದ ದೂರವೇ ಉಳಿದಿದ್ದಾನೆ. ಆತನ ಸೇವೆಯ ಅವಕಾಶವೂ ನನಗಿಲ್ಲ. ಭರತನು ನಿತ್ಯ ಮಾಡುತ್ತಿರುವ ಹೋಮ ಹವನಗಳಿಂದ ಮೇಲೇಳುವ ಧೂಮವನ್ನು ಮಾತ್ರ ಅರಮನೆಯ ಬಿಸಿಲುಮಹಡಿಯಲ್ಲಿ ನಿಂತುಕೊಂಡು ನೋಡಬಲ್ಲೆ. ನಾನು ಬೆಳೆಸಿದ ಸೌಗಂಧಿಕಾ ಪುಷ್ಪದ ಸುಗಂಧವನ್ನು ಮಂದಮಾರುತ ಒಯ್ದು ಭರತನನ್ನು ಸ್ಪರ್ಶಿಸಿದರೂ ಅದು ಆತನಿಗೆ ಗೊತ್ತಾಗುವುದಿಲ್ಲ. ಆದರೆ ನಂದಿಗ್ರಾಮವನ್ನು ಹಾಯ್ದು ಬರುವ ಗಾಳಿ ಹೊತ್ತುತರುವ ಹೊಗೆಯಿಂದ ದಿನವೂ ನನ್ನ ಕಣ್ಣುಗಳಲ್ಲಿ ನೀರು ತುಂಬಿ ಹರಿಯುತ್ತದೆ.

ಮಾಂಡವಿಯ ಹೊಟ್ಟೆಯೊಳಗೆ ತಳಮಳವಾಯಿತು. ಆಕೆ ಅಲ್ಲಿಂದೆದ್ದು ತಾನು ತವರಿನಿಂದ ತಂದು ನೆಟ್ಟು ಬೆಳೆಸಿದ ಮಾಧವೀಲತೆಯ ಬಳಿ ಹೋದಳು. ಅದು ಸೊಂಪಾಗಿ ಹರಡಿದ್ದು ಅದರಿಂದ ಮಂಟಪವನ್ನು ರಚಿಸಲಾಗಿತ್ತು. ಅಲ್ಲೇ ಮಾಂಡವಿ ವಿಶ್ರಮಿಸಿದಳು. ಆದರೆ ಆಕೆಯ ಮನಸ್ಸು ವಿಶ್ರಮಿಸಲಿಲ್ಲ. ಹರಿದು ಬರುತ್ತಿರುವ ಯೋಚನೆಗಳಿಗೆ ಆಕೆಯೂ ಕಡಿವಾಣ ಹಾಕಲಿಲ್ಲ. ಮರುದಿನ ಶ್ರೀರಾಮಚಂದ್ರನು, ಸೀತೆ–ಲಕ್ಷ್ಮಣರೊಡನೆ ಅಯೋಧ್ಯೆಗೆ ಆಗಮಿಸಲೇಬೇಕು. ಭರತ ಅಂದು, ತನ್ನ ಅಣ್ಣನಿಂದ ಪಾದುಕೆಗಳನ್ನು ಸ್ವೀಕರಿಸುವಾಗ, ಹದಿನಾಲ್ಕು ವರ್ಷಗಳ ಬಳಿಕ, ವಸಂತ ಋತುವಿನ ಆರಂಭದೊಡನೆ ಚೈತ್ರಮಾಸದ ಮೊದಲ ದಿನವೇ ಶ್ರೀರಾಮಚಂದ್ರನು

ಅಯೋಧ್ಯೆಗೆ ಹಿಂತಿರುಗಿ ಬಾರದಿದ್ದಲ್ಲಿ ತಾನು ಅಗ್ನಿಪ್ರವೇಶ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದ. ರಘುವಂಶದ ಅರಸರೆಲ್ಲ ಪ್ರತಿಜ್ಞಾಪಾಲಕರೆಂದು ತಿಳಿದಿದ್ದ ಮಾಂಡವಿ ಅದನ್ನು ನೆನೆದೇ ನಡುಗಿದಳು. ಆಕೆಯ ಚೇಟಿಯೊಬ್ಬಳು ಅಂದು ಬೆಳಿಗ್ಗೆಯೇ ಬಂದು, ಭರತನು ನಂದಿಗ್ರಾಮದ ತನ್ನ ಆಶ್ರಮದ ಬಳಿ ಶ್ರೀಗಂಧದ ಕಾಷ್ಠಗಳನ್ನು ಒಡ್ಡಿ ಚಿತೆಗೆ ಸಿದ್ಧತೆ ಮಾಡಿರುವುದನ್ನು ತಿಳಿಸಿದ್ದಳು. ಅಕಸ್ಮಾತ್ ಶ್ರೀರಾಮನು ನಾಳೆ ಬಾರದಿದ್ದಲ್ಲಿ! ಮುಂದಕ್ಕೆ ಮಾಂಡವಿ ಯೋಚಿಸದಾದಳು. ಹಾಗಾಗಲು ಸಾಧ್ಯವಿಲ್ಲ ಎಂದಿತು ಆಕೆಯ ಒಳಮನಸ್ಸು. ಅಷ್ಟರಲ್ಲಿ ದೂರದ ಮಾಮರದಲ್ಲಿ ಕುಳಿತ ಕೋಗಿಲೆಯೊಂದು ಉಲಿಯಿತು. ಮಾಂಡವಿಯ ಭಯಗ್ರಸ್ತ ಮನಸ್ಸು ಮತ್ತೂ ಕುಗ್ಗಿತು. 'ಎಲೈ ಕೋಗಿಲೆಯೇ! ನೀನೇಕೆ ಶಿಶಿರದ ಕ್ರೌಂಚ ಪಕ್ಷಿಗಳ ನಿನಾದವನ್ನಡಗಿಸಲು ಯತ್ನಿಸುವೆ? ವಸಂತನ ಆಗಮನಕ್ಕೆ ಇನ್ನೂ ಸಮಯವಿದೆ. ಹೋಗು, ಹಿಂದಕ್ಕೆ ಹೋಗು' ಎಂದು ಕೂಗಿ ಹೇಳಬೇಕೆನಿಸಿತು ಮಾಂಡವಿಗೆ. ಆದರೆ ಏನೂ ಮಾಡದೆ ಸುಮ್ಮನಿದ್ದಳು. ಅಷ್ಟರಲ್ಲಿ ಅಲ್ಲಿಗೆ ಬಂದ ಶ್ರುತಕೀರ್ತಿ ತನ್ನ ಅಕ್ಕನ ಕುಂದಿದ ಮುಖವನ್ನು ತನ್ನ ಬೊಗಸೆಗಳಲ್ಲಿ ಹಿಡಿದೆತ್ತಿ ನೋಡಿದಳು. ಶಿಶಿರದಲ್ಲಿ ಪ್ರಕೃತಿಯ ಶೋಭೆ ಅಡಗುವಂತೆ ಈ ಮುಖದಲ್ಲೂ ಶೋಭೆ ಅಡಗಿತ್ತು. ಆದರೆ ಹಿಮಬಿಂದುಗಳಂತೆ ಆಕೆಯ ಕಣ್ಣೆವೆಯಲ್ಲಿದ್ದ ಅಶ್ರು ಬಿಂದುಗಳು ತಮ್ಮ ಮೇಲೆ ಬಿದ್ದ ಪಡುವಣ ಸೂರ್ಯನ ಕಿರಣಗಳನ್ನು ಒಡೆದು ಸಪ್ತವರ್ಣಗಳನ್ನು ಸೃಷ್ಟಿಸಿ, ಆ ದುಃಖ ದುಮ್ಮಾನದಲ್ಲೂ ಆಕೆಯ ಕಣ್ಣಿಗೆ ವಿಶೇಷ ಕಾಂತಿಯನ್ನು ಕೊಟ್ಟಿರುವುದನ್ನು ನೋಡಿ ಶ್ರುತಕೀರ್ತಿ ವಿಸ್ಮಿತಳಾದಳು. ಇದು ಭವಿಷ್ಯದ ಶುಭಸೂಚನೆ ಎಂಬ ಅರಿವು ಆಕೆಯಲ್ಲಿ ಮೂಡಿ, ಮಾಂಡವಿಯಲ್ಲಿ ಧೈರ್ಯ ತುಂಬಿದಳು. ಸೂರ್ಯನು ಪಡುವಣ ಬೆಟ್ಟದಾಚೆ ಮರೆಯಾಗುತ್ತಿದಂತೆ ಆ ರಾತ್ರಿಯ ಆಗಸದಲ್ಲಿ ಚಂದ್ರ ಇರುವುದಿಲ್ಲ ಎಂಬ ಅರಿವಾಗಿ ಅವರಿಬ್ಬರೂ ತಮ್ಮ ಅರಮನೆಯತ್ತ ನಡೆದರು.

ಅರಮನೆಯನ್ನು ಸಮೀಪಿಸುತ್ತಿದ್ದಂತೆ ದೂತನೊಬ್ಬ ಓಡಿ ಬಂದ. ದೂತನನ್ನು ಕಂಡು "ಏನು ಸಂದೇಶ? ಶುಭವೋ. ಅಶುಭವೋ?" ಎಂದು ಭಯ, ಕಳವಳಗಳು ಮಾಂಡವಿಯ ಮನಸ್ಸನ್ನು ಆವರಿಸಿದವು. ಅವನ ಶಾಂತ ಮುಖಮುದ್ರೆಯಲ್ಲಿ ಭರವಸೆಯನ್ನು ಕಂಡು ಕೇಳಿದಳು, "ಏನು ವಾರ್ತೆ ತಂದಿರುವೆ?" "ದೊರೆ ಶ್ರೀರಾಮಚಂದ್ರ ಬರುತ್ತಿರುವರಂತೆ, ದೂತರು ತಿಳಿಸಿದ್ದಾರೆ. ಭರತ ಮಹಾರಾಜರೂ ಕ್ಷೇಮದಿಂದಿದ್ದಾರೆ!" ವಾರ್ತೆಯನ್ನು ಕೇಳಿ ಸಂತಸಗೊಂಡ ಮಾಂಡವಿಯ ಮುಖದಲ್ಲಿ ತೃಪ್ತಿಯ ನಗು ಹೊರಹೊಮ್ಮಿತು. ವನವಾಸ ಮುಗಿಯಿತೇ? ತಪಸ್ಸು ಫಲ ನೀಡಿತೇ? ಶ್ರುತಕೀರ್ತಿ ಅಕ್ಕನನ್ನು ತಬ್ಬಿಕೊಂಡು ಸಂತೈಸುತ್ತ ಮತ್ತಷ್ಟು ಮುದ ನೀಡಿದಳು. ಅವರಿಬ್ಬರೂ ಬೇಗ ಬೇಗ ಅರಮನೆಯತ್ತ ಹೆಜ್ಜೆ ಹಾಕಿದರು.

ಭರತನನ್ನು ಎದುರುಗೊಂಡಾಗ ಏನೇನೋ ಪ್ರಶ್ನೆಗಳನ್ನು ಕೇಳಬೇಕು ಎಂದು ಮಾಂಡವಿ ಅಂದುಕೊಂಡಳು. ಶ್ರೀರಾಮನು ತನ್ನ ಜತೆಗೆ ಬರುವೆನೆಂದ ಸೀತೆಯ ರಕ್ಷಣೆಯ ಭಾರವನ್ನು ಸ್ವೀಕರಿಸಿ, ಕಾಡಿಗೆ ನಡೆದ. ಆದರೆ ನೀವು ನನ್ನನ್ನು ಕೇಳದೆಯೇ ಹೊರಟಿರಿ. ಊರಿನಿಂದ ದೂರ ನೆಲೆಸಿದಿರಿ. ನಾನು ನಿಮ್ಮ ಅರ್ಧಾಂಗಿಯಲ್ಲವೇ? ನನ್ನ ಮಾತು, ಭಾವನೆ, ವೇದನೆಗಳಿಗೆ ನಿಮ್ಮ ಮನದಲ್ಲಿ ಕಿಂಚಿತ್ತೂ ಆಸ್ಪದವಿಲ್ಲವೇ? ಶ್ರೀರಾಮನಲ್ಲಿ ಸೀತೆಗಿರುವ ಪ್ರೀತಿಯ ಸ್ಥಾನದಂತೆ ನಿಮ್ಮಲ್ಲಿ ನನಗೂ ಇರಬೇಕಲ್ಲವೇ? ಭರತ ಏನು ಉತ್ತರ ನೀಡುವನು? ಶ್ರೀರಾಮನ ಆಗಮನದ ಸಂತಸದಲ್ಲಿ ಎಲ್ಲವನ್ನೂ ಮರೆತೇಬಿಡುವನೇ? ತನ್ನ ತಾಯಿ ಕೈಕೇಯಿಯನ್ನಂತೂ ಮಾತನಾಡಿಸದೆ ಅದೆಷ್ಟೋ ವರುಷಗಳೇ ಸಂದಿವೆ. ನನ್ನನ್ನೂ ಈಗ ಮರೆತುಬಿಟ್ಟಿದ್ದರೆ? ಹೀಗೆ ಅವಳ ಮನಸ್ಸಿನಲ್ಲಿ ಏಳುತ್ತಿದ್ದ ನೂರಾರು ಪ್ರಶ್ನೆಗಳಿಗೆಲ್ಲ ಉತ್ತರವಿತ್ತು ಭರತನಲ್ಲಿ, ಅವನ ಬರುವಿಕೆಯಲ್ಲಿ, ಅವನ ಸಾನಿಧ್ಯದಲ್ಲಿ. ತನ್ನ ಆತಂಕವನ್ನು ತೋರ್ಪಡಿಸದೆ ತಾಳ್ಮೆಯಿಂದ ಎಲ್ಲವನ್ನು ನುಂಗಿಕೊಂಡು ನಡೆದಳು. ಶುಭದ ಹೊಂಗಿರಣ ಮೂಡುತ್ತಿದ್ದಂತೆ ಅರಮನೆಯಿಂದ ಮಂಗಳಧ್ವನಿಗಳು ಅಲೆಯಲೆಯಾಗಿ ತೇಲಿಬಂದವು. ಅರಮನೆಯ ಪರಿಜನರೆಲ್ಲ ಅಲಂಕಾರಗಳನ್ನು ಕೈಯಲ್ಲಿ ಹಿಡಿದು ಸಡಗರದಿಂದ ಸಜ್ಜುಗೊಳಿಸುತ್ತಿದ್ದರು. ಕಾರ್ಮೋಡ ಸರಿದು ಸೂರ್ಯನ ಹೊಂಗಿರಣವು ನಸುಗೆಂಪಿನ ರಂಗವಲ್ಲಿಯನ್ನು ಬಾನಿನಲ್ಲಿ ಚೆಲ್ಲಿದಂತೆ, ಪ್ರಕೃತಿಯ ಸೊಬಗು ಎಲ್ಲೆಡೆ ಹರಡಿತ್ತು. ಮಾಂಡವಿ ಅರಮನೆಯನ್ನು ಪ್ರವೇಶಿಸಿ ಅತ್ತೆಯರಾದ ಕೌಸಲ್ಯೆ, ಸುಮಿತ್ರೆ, ಕೈಕೆಯರಿಗೆ ನಮಸ್ಕರಿಸಿ ಮರುದಿನದ ಆಗಮನವನ್ನು ನಿರೀಕ್ಷಿಸುತ್ತ, ಭರತನನ್ನು ಬರಮಾಡಿಕೊಳ್ಳಲು ಎಲ್ಲ ವ್ಯವಸ್ಥೆಗಳನ್ನು ಪ್ರಾರಂಭಿಸಿದಳು. ಭರತನ ಸುಖವೇ ತನ್ನ ಸುಖವೆಂದು ತಿಳಿದಿದ್ದ ಅವಳಿಗೆ ಇದಾವುದೂ ಕಷ್ಟವೆನಿಸಿಸಲಿಲ್ಲ. ಅಕ್ಕ ಸೀತೆ ಪಟ್ಟ ಕಷ್ಟಗಳೆಷ್ಟು! ಆಹಾ! ಅದೇನು ಧೈರ್ಯ. ಸ್ಥೈರ್ಯ! ಅವಳನ್ನು ಕಂಡು ಎಲ್ಲವನ್ನೂ ಕೇಳಬೇಕು, ಅವಳನ್ನು ಸಂತೈಸಬೇಕು ಎಂಬ ಮಮತೆಯ ಭಾವ ಉಕ್ಕಿಬಂತು.

ಮಾಂಡವಿ ಸೀತೆಯ ಛಾಯೆಯಲ್ಲಿ ಬೆಳೆದಿದ್ದರೂ ಬುದ್ಧಿವಂತೆ, ಧೀರೆ, ಅಸೂಯೆ–ದ್ವೇಷಗಳನ್ನು ಗೆದ್ದವಳು. ಹದಿನಾಲ್ಕು ವರ್ಷಗಳ ತಪಸ್ಸು ಅವಳ ವ್ಯಕ್ತಿತ್ವಕ್ಕೆ ಮತ್ತಷ್ಟು ವರ್ಚಸ್ಸನ್ನು ತಂದಿತ್ತು, ತಾಳ್ಮೆಯನ್ನು ಕಲಿಸಿತ್ತು. ಅಂತೆಯೇ ಭರತನ ಬಗ್ಗೆ ಮತ್ತಷ್ಟು ಪ್ರೀತಿಯನ್ನೂ ಜಾಗೃತಗೊಳಿಸಿತ್ತು. ರಾಜ್ಯದ ಆಮಿಷಕ್ಕೆ ಬೀಳದೆ ತನ್ನ ಭ್ರಾತೃವಾತ್ಸಲ್ಯವನ್ನು ಮೆರೆದ ಪತಿಯನ್ನು ನೆನೆದು ಧನ್ಯತೆಯ ಭಾವ ಮೂಡಿತು ಮಾಂಡವಿಯ ಮನಸ್ಸಿನಲ್ಲಿ. 'ನೀನು ಧನ್ಯೆ' ಎಂದುಲಿಯಿತು ಅವಳ ಅಂತರಂಗ.